ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ಎನ್ಎಸ್ - 19

3ನೇ ವರ್ಷ 33ನೇ ಸಂಚಿಕೆ ಕೊಪ್ಪ 19-5-1985 ಭಾನುವಾರ ಬೆಲೆ 40 ಪೈಸೆ

ಬೊಮ್ಮಲಾಪುರ ಗ್ರಾಮದಲ್ಲಿ ಸಿಂಡಿಕೇಟ್ ಬ್ಯಾಂಕ್ ಆಶ್ರಯದಲ್ಲಿ

ಜಾನುವಾರು ಪ್ರದರ್ಶನ, ಚಿಕಿತ್ಸೆ ಶಿಬಿರ

ಬೊಮ್ಮಲಾಪುರ: ಈ ಗ್ರಾಮದ ಹೊಕ್ಕಳಿಕೆಯಲ್ಲಿ ಹರಿಹರಪುರದ ಸಿಂಡಿಕೇಟ್ ಬ್ಯಾಂಕ್ ಆಶ್ರಯದಲ್ಲಿ ಜಾನುವಾರುಗಳ ಪ್ರದರ್ಶನ ಮತ್ತು ಚಿಕಿತ್ಸಾ ಶಿಬಿರ ಮೇ 11 ರಂದು ನಡೆಯಿತು. ಹಳ್ಳಿಪ್ರದೇಶವಾದರೂ ಸಾಕಷ್ಟು ಸಂಖ್ಯೆಯಲ್ಲಿ ಜಾನುವಾರುಗಳನ್ನು ರೈತರು ಕರೆತಂದಿದ್ದರು. ಉತ್ತಮವಾದ ರಾಸುಗಳಿಗೆ ಸಿಂಡಿಕೇಟ್ ಬ್ಯಾಂಕ್ ವತಿಯಿಂದ ಬಹುಮಾನ ನೀಡಿ ಅವುಗಳ ಮಾಲೀಕರುಗಳನ್ನು ಸನ್ಮಾನಿಸಲಾಯಿತು. ಹೆಚ್. ಶಿವಪ್ಪ ಗೌಡರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಪಶುವೈದ್ಯರುಗಳಾದ ಡಾ॥ ಸೂರ್ಯನಾರಾಯಣ—ಜಾನುವಾರುಗಳಿಗೆ ಬರುವ ಕಾಯಿಲೆ ಮತ್ತು ಚಿಕಿತ್ಸೆಯ ಬಗ್ಗೆ, ಹಾಗೂ ಡಾ॥ ಶಿವಲಿಂಗಮೂರ್ತಿ–ಜಾನುವಾರುಗಳಿಗಾಗಿ ಪಡೆದ ಸಾಲದ ಮಹತ್ವ ಕುರಿತು ವಿವರಿಸಿದರು. ಕೊಪ್ಪದ ಪಶುವೈದ್ಯಾಧಿಕಾರಿಗಳಾದ ಡಾ॥ ಶ್ರೀನಿವಾಸಮೂರ್ತಿ ಇನ್ನು ಮುಂದೆ ಪ್ರತಿ ಶನಿವಾರ ತಮ್ಮ ಆಸ್ಪತ್ರೆಯ ಸಂಚಾರಿ ಘಟಕ ಹೊಕ್ಕಳಿಕೆ ಮತ್ತು ಬೊಮ್ಮಲಾಪುರಕ್ಕೆ ಬಂದು ಪಶುಗಳಿಗೆ ಚಿಕಿತ್ಸೆ ನೀಡುವುದಾಗಿಯೂ, ಎಲ್ಲರೂ ಇದರ ಉಪಯೋಗ ಪಡೆಯಬೇಕೆಂದೂ ತಿಳಿಸಿದರು.

ಇದೊಂದು ಮಾದರಿ ಶಿಬಿರವಾಗಿತ್ತು. ಬೊಮ್ಮಲಾಪುರ ಗ್ರಾಮದ ರೈತರ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುತ್ತಿರುವ ಸಿಂಡಿಕೇಟ್ ಬ್ಯಾಂಕ್ ಮ್ಯಾನೇಜರ್ ಬಿ. ಆರ್. ಪೂಜಾರ್ ಮತ್ತು ಗ್ರಾಮೀಣ ಅಭಿವೃದ್ಧಿ ಅಧಿಕಾರಿ ಎಂ. ಆರ್. ವಿ. ಶೆಟ್ಟಿ ಇವರುಗಳ ಬಗ್ಗೆ ಗ್ರಾಮಸ್ಥರು ಬಹಳ ಮೆಚ್ಚುಗೆ ಹೊಂದಿದ್ದಾರೆ.

(ವರದಿ: ಬಿ. ಮಂಜಯ್ಯ ಶೆಟ್ಟಿ)

ಏಲಕ್ಕಿ: ಸಹಾಯ ಧನ, ಮೈಲುತುತ್ತ ನೀಡಿಕೆ

ಕೊಪ್ಪ: ಏಲಕ್ಕಿ ಮಂಡಳಿಯಿಂದ ಏಲಕ್ಕಿ ಮರು ಗಿಡ ನೆಡುವಿಕೆಗೆ ಸಹಾಯಧನ ನೀಡುವ ಬಗ್ಗೆ ಅರ್ಜಿಯನ್ನು ಕರೆಯಲಾಗಿದೆ. ಭರ್ತಿ ಮಾಡಿದ ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕ 31.5 85.

ಏಲಕ್ಕಿ ತೋಟಗಳಲ್ಲಿ ಕಾಣಿಸಿಕೊಳ್ಳುವ 'ಅಳಗಲ್' ಅಥವಾ ಏಲಕ್ಕಿ ಕೊಳೆರೋಗವನ್ನು ತಡೆಗಟ್ಟಲು ಮತ್ತು ಶೇಕಡ ಒಂದರ ಬೋರ್ಡೋ ಮಿಶ್ರಣವನ್ನು ಸಿಂಪಡಿಸಲು ಏಲಕ್ಕಿ ತೋಟಗಳನ್ನು ನೊಂದಾಯಿಸಿದ ಅಥವಾ ನೊಂದಾವಣೆಗೆ ಅರ್ಜಿ ಹಾಕಿರುವ ಬೆಳೆಗಾರರಿಗೆ ಎಕರೆಗೆ ನಾಲ್ಕು ಕೆ.ಜಿ.ಯಂತೆ ಶೇಕಡ ಐವತ್ತರ ದರದಲ್ಲಿ ಮೈಲುತುತ್ತವನ್ನು ಏಲಕ್ಕಿ ಮಂಡಳಿ ಸರಬರಾಜು ಮಾಡುತ್ತದೆ. ಭರ್ತಿ ಮಾಡಿದ ಅರ್ಜಿಗಳನ್ನು ಸಮೀಪದ ಏಲಕ್ಕಿ ಮಂಡಳಿಯ ಕಛೇರಿಗೆ 20-5-85ಕ್ಕೆ ಮುಂಚಿತವಾಗಿ ತಲುಪಿಸಿ ಇದರ ಉಪಯೋಗವನ್ನು ಪಡೆಯಬಹುದು.

ಕಮ್ಮರಡಿ: ಬೇಡಿಕೆ ಈಡೇರಿಕೆಯ ಭರವಸೆ

(ವರದಿ: ಚಾವಲ್ಮನೆ ಸುರೇಶ್ ನಾಯಕ್)

ಕಮ್ಮರಡಿ: ಈ ಊರಿನ ಮತ್ತು ಚಾವಲ್ಮನೆ ಗ್ರಾಮದ ಪ್ರಮುಖ ಬೇಡಿಕೆಗಳನ್ನು ಪರಿಶೀಲಿಸಿ ಈಡೇರಿಸುವ ಭರವಸೆಯನ್ನು ಮಂತ್ರಿ ಗೋವಿಂದ ಗೌಡರು ಮೇ 13 ರಂದು ಇಲ್ಲಿನ ಜನತೆಗೆ ನೀಡಿದರು.

ಅವರು ಇಲ್ಲಿನ ದುರ್ಗಾಂಬ ಕಲ್ಯಾಣ ಮಂದಿರವನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಗ್ರಾಮಸ್ಥರ ಪರವಾಗಿ ಕೆ. ರಘುನಾಥ ಭಟ್ಟರು ಸಲ್ಲಿಸಿದ ಮನವಿಗೆ ಉತ್ತರಿಸಿ ಈ ಭರವಸೆ ಕೊಟ್ಟರು. ಮಾಗ ಚಂದ್ರಶೇಖರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದು, ಎ.ಬಿ. ವಾಸಪ್ಪ ಮುಖ್ಯ ಅತಿಥಿಗಳಾಗಿದ್ದರು.

ಇಲ್ಲಿನ ಆಸ್ಪತ್ರೆಗೆ 10 ಹಾಸಿಗೆಗಳ ವಾರ್ಡ್ ಮಂಜೂರು ಮಾಡಿಸಿ, ಒಬ್ಬ ಮಹಿಳಾ ವೈದ್ಯಾಧಿಕಾರಿಯನ್ನು ನೇಮಿಸುವುದು, ಸಾರ್ವಜನಿಕ ಗ್ರಂಥಾಲಯ ಮಂಜೂರಾತಿ, ಕಮ್ಮರಡಿಯಿಂದ ತೀರ್ಥಮುತ್ತೂರು, ಹಾರೋಗೊಳಿಗೆ, ಕೊಂಗವಳ್ಳಿ, ಹೊಸ್ಕೆರೆ, ಬಿಳ್ಮಡಿ ಮಾರ್ಗವಾಗಿ ತೀರ್ಥಹಳ್ಳಿಗೆ ಸಂಪರ್ಕ ಕಲ್ಪಿಸಬಹುದಾದ ಪಕ್ಕಾ ರಸ್ತೆ ನಿರ್ಮಾಣವನ್ನು ಎಂ.ಎನ್.ಪಿ ಯೋಜನೆಯನ್ವಯ ಮಾಡಿಸುವುದು ಹಾಗೂ ಚಾವಲ್ಮನೆ ಪಂಚಾಯ್ತಿಗೆ ಒಬ್ಬ ಕೃಷಿ ಸಹಾಯಕರ ನೇಮಕ–ಇವು ಪ್ರಮುಖ ಬೇಡಿಕೆಗಳಾಗಿದ್ದವು.

ಕೊಪ್ಪ ತಾಲ್ಲೂಕೊಂದರಲ್ಲೇ ಬಾವಿಗಾಗಿ 1000 ಅರ್ಜಿಗಳು ಬಂದಿದ್ದು ತೀರ ಬಡವರಿಂದಲೇ ಬಂದಿರುವ ಈ ಅರ್ಜಿಗಳಿಗೆ ಮೊದಲ ಪ್ರಾಶಸ್ತ್ಯ ನೀಡುವುದಾಗಿ ತಿಳಿಸಿದ ಗೋವಿಂದ ಗೌಡರು, "ನಿಮ್ಮೆಲ್ಲರ ಅಪೇಕ್ಷೆಯಿಂದಲೇ ನಾನು ಮಂತ್ರಿಯಾಗಿರುವುದು. ಆದ್ದರಿಂದ ನಾನು ನನ್ನ ಕೈಲಾದ ಮಟ್ಟಿಗೆ ನಿಮ್ಮ ಸೇವೆ ಮಾಡುತ್ತೇನೆ. ಅದೇ ರೀತಿ, ಹಳ್ಳಿಗರೊಂದಿಗೆ ಸೌಜನ್ಯದಿಂದ ವರ್ತಿಸುವಂತೆ ಎಲ್ಲಾ ಅಧಿಕಾರಿಗಳಿಗೂ ಹೇಳಿದ್ದೇನೆ" ಎಂದರು.

ಕುಸುರಿಗೆ ಕೃಷ್ಣಪ್ಪ ಗೌಡ ಸ್ವಾಗತಿಸಿದರು. ದುರ್ಗಾಂಬ ದೇವಸ್ಥಾನದ ಮನವಿಯನ್ನು ಹೊರಣೇಬೈಲು ಕುಮಾರ್ ಸಲ್ಲಿಸಿದರು. ಕೆ.ಪಿ. ಕೃಷ್ಣಮೂರ್ತಿ ವಂದಿಸಿದರು.

ಕೊಪ್ಪದ ಸರ್ಕಾರಿ ಆಸ್ಪತ್ರೆ ಕಟ್ಟಡಕ್ಕೆ ಅಂತೂ ಮೋಕ್ಷ ಸನ್ನಿಹಿತ

ಕೊಪ್ಪ: ಎರಡು ವರ್ಷಗಳ ಹಿಂದೆಯೇ ಸಿದ್ಧವಾಗಿದ್ದು, ಉದ್ಘಾಟನೆಗಾಗಿ ಕಾಯುತ್ತಿರುವ ಇಲ್ಲಿನ ಸರ್ಕಾರಿ ಆಸ್ಪತ್ರೆಯ ಕಟ್ಟಡಕ್ಕೆ ಮೇ 24 ರಂದು ಮೋಕ್ಷ ಲಭಿಸಲಿದೆ.

ಅಂದು ಮಧ್ಯಾಹ್ನ 4 ಗಂಟೆಗೆ ರಾಜ್ಯದ ಮಂತ್ರಿಗಳಾದ ಡಾ॥ ತಿಮ್ಮೇಗೌಡ, ಹೆಚ್. ಡಿ. ದೇವೇಗೌಡ ಮತ್ತು ಹೆಚ್.ಜಿ. ಗೋವಿಂದ ಗೌಡ ಇವರುಗಳ ಉಪಸ್ಥಿತಿಯಲ್ಲಿ ಕಟ್ಟಡದ ಉದ್ಘಾಟನೆ ನಡೆಯಲಿದೆ.

ಈ ಕಟ್ಟಡದ ಉದ್ಘಾಟನೆಯೊಂದಿಗೆ ಈವರೆಗಿನ ಪ್ರಾಥಮಿಕ ಆರೋಗ್ಯ ಕೇಂದ್ರ 'ಜನರಲ್ ಆಸ್ಪತ್ರೆ'ಯಾಗಿ ಮೇಲ್ದರ್ಜೆಗೇರಲಿದೆಯೆಂದು ತಿಳಿದುಬಂದಿದೆ.

ತಡ

ಆಸ್ಪತ್ರೆಗೆ ಹೊಂದಿಕೊಂಡು ಆಡಳಿತ ವಿಭಾಗ ಹಾಗೂ ಹೊರ ರೋಗಿಗಳ ವಿಭಾಗಗಳಿಗಾಗಿಯೂ ಒಂದು ಕಟ್ಟಡ ಆಗಬೇಕಾಗಿದ್ದು ಅದಕ್ಕಾಗಿ 10 ಲಕ್ಷ ರೂ.ಗಳ ಯೋಜನೆ ಸಿದ್ಧವಾಗಿದೆ. ಆದರೆ ಅಷ್ಟು ದೊಡ್ಡ ಮೊತ್ತ ಸಂಪುಟದ ಮಟ್ಟದಲ್ಲೇ ಮಂಜೂರಾಗಬೇಕಾದ್ದರಿಂದ, ಇದಕ್ಕೆ 'ಅನುಕೂಲ'ವಾಗಲೆಂದು ಮುಖ್ಯಮಂತ್ರಿಗಳ ಕೈಯಲ್ಲೇ ಉದ್ಘಾಟನೆ ಮಾಡಿಸುವ ಪ್ರಯತ್ನ ಈ ವರೆಗೆ ನಡೆದಿತ್ತು. ಆದರೆ ಪದೇ ಪದೇ ಬಂದ ಚುನಾವಣೆಗಳು, ನಡುವೆ ಜನತಾ ಸರ್ಕಾರದ ಅತಂತ್ರ ಸ್ಥಿತಿ, ಮುಖ್ಯಮಂತ್ರಿಗಳ ಅನಾರೋಗ್ಯ ಇತ್ಯಾದಿಗಳಿಂದಾಗಿ ಈ ಪ್ರಯತ್ನ ಯಶಸ್ವಿಯಾಗದೆ, ಉದ್ಘಾಟನೆಯ ದಿನ ಗಣಪನ ಮದುವೆಯಂತಾಗಿತ್ತು.

ಸದರಿ ಕಟ್ಟಡದ ಮಂಜೂರಾತಿಗಾಗಿ ತಾವು ಪ್ರಯತ್ನ ಮುಂದುವರಿಸಿರುವುದಾಗಿ ಗೋವಿಂದ ಗೌಡರು 'ಮುಂಜಾವು'ಗೆ ತಿಳಿಸಿದರು.

ಶೃಂಗೇರಿ ಹಿಂದುಳಿದ ವರ್ಗ ಹಾಸ್ಟೆಲ್ ಉದ್ಘಾಟನೆ

ಅದೇ ದಿನ ಬೆಳಿಗ್ಗೆ ಸಚಿವರುಗಳು ಶೃಂಗೇರಿಯಲ್ಲಿ ಹಿಂದುಳಿದ ವರ್ಗಗಳ ನೂತನ ಹಾಸ್ಟೆಲನ್ನೂ ಉದ್ಘಾಟಿಸುವರು.

ಅಡ್ಡಗದ್ದೆ - ಶಾನುವಳ್ಳಿ ಮಧ್ಯೆ ಬಸ್ ರಹದಾರಿ ಆಗಿದೆ:

–ಬಿಲಗದ್ದೆಯಲ್ಲಿ ಸಚಿವರ ಪ್ರಕಟಣೆ

ಬಿಲಗದ್ದೆ: ಕೊಪ್ಪ ತಾ॥ ಶಾನುವಳ್ಳಿಯಿಂದ ಬಿಲಗದ್ದೆ–ಬೇಗಾನೆ ಮಾರ್ಗವಾಗಿ ಅಡ್ಡಗದ್ದೆಗೆ ತಲುಪುವ ರಸ್ತೆಯಲ್ಲಿ ಒಂದು ಬಸ್ ಸಂಚಾರಕ್ಕೆ ಪರ್ಮಿಟ್ ಆಗಿರುವುದಾಗಿ ಸಚಿವ ಗೋವಿಂದ ಗೌಡರು ಇಲ್ಲಿ ಮೇ 14 ರಂದು ಪ್ರಕಟಿಸಿದರು.

ಹಿರಿಯ ಪ್ರಾಥಮಿಕ ಶಾಲೆ ಮತ್ತು ಕುಡಿಯುವ ನೀರಿನ ಯೋಜನೆ ಉದ್ಘಾಟಿಸಿದ ಮಂತ್ರಿಗಳು, ಗ್ರಾಮಸ್ಥರು ಮಂಡಿಸಿದ 20 ಬೇಡಿಕೆಗಳ ಪೈಕಿ, ಎಲ್ಲವನ್ನೂ ಸರ್ಕಾರವೇ ಮಾಡಬೇಕೆಂಬ ಮನೋಭಾವ ತಪ್ಪು. ಕುಡಿವ ನೀರು, ರಸ್ತೆ, ಜನತಾಮನೆ, ಜಮೀನಿಲ್ಲದವರಿಗೆ ಜಮೀನು ನೀಡಿಕೆ (ಆ ಪ್ರದೇಶದಲ್ಲಿ ಇದ್ದರೆ ಮಾತ್ರ)–ಇವುಗಳಿಗೆ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

ಎ.ಬಿ. ವಾಸಪ್ಪ ಅಧ್ಯಕ್ಷತೆ ವಹಿಸಿದ್ದು, ಕಾವಳಿ ಲಕ್ಷ್ಮೀನಾರಾಯಣಪ್ಪ ಮುಖ್ಯ ಅತಿಥಿಗಳಾಗಿದ್ದರು. ಬಿಲಗದ್ದೆ ಜನತಾ ಪಕ್ಷದ ಸಮಿತಿ ಅಧ್ಯಕ್ಷ ಕೆ. ಎಸ್. ರವಿಚಂದ್ರ ಸ್ವಾಗತಿಸಿ, ಕೆ. ಎನ್. ಗೋವಿಂದ ರಾವ್ ವಂದಿಸಿದರು.

ಅನಿವಾರ್ಯ ಕಾರಣಗಳಿಂದ ನಮ್ಮ 12-5-85 ರ ಸಂಚಿಕೆ ಪ್ರಕಟವಾಗಲಿಲ್ಲ. ಇದಕ್ಕಾಗಿ ವಿಷಾದಿಸುತ್ತೇವೆ. —ಸಂ·

ಶಿವಮೊಗ್ಗ ಅಡಿಕೆ ಪೇಟೆ

('ಏವೀಶಂ' ಅವರಿಂದ)

ತಾರೀಕು: 15-5-1985

ಸರಕು: 2689 – 3141

ಬೆಟ್ಟೆ: 2389 – 2529

ಗೊರಬಲು: 1800 – 2150

ಬೆಟ್ಟೆ ಧಾರಣೆ ಕಳೆದ 2 ವಾರಗಳ ಹಿಂದೆ ಇದ್ದುದಕ್ಕಿಂತ 100 ರೂ.ಗಳಷ್ಟು ಮಾತ್ರ ಇಳಿದಿದೆಯಾದರೂ ಉಳಿದಂತೆ ಧಾರಣೆಮಾಸಿ ಸ್ಥಿರವಾಗಿಯೇ ಮುಂದುವರಿಯುತ್ತಿದೆ. ಸದ್ಯಕ್ಕೆ ಹೆಚ್ಚಿನ ವ್ಯತ್ಯಾಸವೇನೂ ಕಂಡು ಬರುವುದಿಲ್ಲ.

ಸಕಲೇಶಪುರ ಏಲಕ್ಕಿ ಧಾರಣೆ

ವ್ಯಾಪಾರದ ತಾರೀಕು	ಗರಿಷ್ಠ ಧಾರಣೆ	ಸರಾಸರಿ ಧಾರಣೆ
7.5.85	298	201
8.5.85	230	140
9.5.85	270	130
10.5.85	277	177

ವೇದಿಕೆ

ಕೊಪ್ಪದಲ್ಲಿ ಈಚೆಗೆ ಪುನರುಜ್ಜೀವನ ಗೊಂಡಿರುವ 'ದಾಸಮಠ'ದಲ್ಲಿ ಆದಿಚುಂಚನಗಿರಿ ವಿದ್ಯಾಪೀಠದ ಆಶ್ರಯದಲ್ಲಿ ಆರಂಭಿಸಲಾಗುತ್ತಿರುವ ವಿದ್ಯಾ ಸಂಸ್ಥೆಯಲ್ಲಿ ನರ್ಸರಿಯಿಂದಲಾಗಾಯ್ತು ಇಂಗ್ಲಿಷ್ ಮಾಧ್ಯಮವನ್ನು ಅಳವಡಿಸಿಕೊಳ್ಳುವ ತೀರ್ಮಾನವಾಗಿರುವುದಾಗಿ ಹೇಳಲಾಗಿದೆ. ಈ ಕುರಿತು ಈ 'ವೇದಿಕೆ'ಯಲ್ಲಿ ಕಳೆದ ಸಂಚಿಕೆಯಲ್ಲಿ ಕ. ನ. ಕೃಷ್ಣಮೂರ್ತಿಯವರು ತಮ್ಮ ಅಭಿಪ್ರಾಯ ಮಂಡಿಸಿದ್ದಾರೆ. ಈ ಸಂಸ್ಥೆಗೆ ಸಂಬಂಧಪಟ್ಟ ಕೆಲವರಲ್ಲಿ ಮತ್ತು ಬೇರೆಯವರಲ್ಲಿ ನಾನು ಚರ್ಚಿಸಿದಾಗ ದೊರೆತ ಅಭಿಪ್ರಾಯಗಳ ಆಧಾರದ ಮೇಲೆ ಇಲ್ಲಿ ಕೆಲವು ವಿಚಾರಗಳನ್ನು ಮುಂದಿಡುತ್ತಿದ್ದೇನೆ.

ಇಂಗ್ಲೀಷ್ ಮಾಧ್ಯಮ ಏಕೆ

ಈ ಪ್ರದೇಶದ ಒಕ್ಕಲಿಗ ಸಮುದಾಯದ ಮುಖಂಡರು ಮತ್ತು ಚಿಂತಕರು ಈ ವಿದ್ಯಾಸಂಸ್ಥೆಯ ಮುಂಚೂಣಿಯಲ್ಲಿದ್ದು, ಅವರು ಮತ್ತು ಅವರಂತೆ ಇಂಗ್ಲಿಷ್ ಮಾಧ್ಯಮ ಬೇಕೆನ್ನುವವರು ಬಹುಮಟ್ಟಿಗೆ ವಾಸ್ತವವಾದ ಒಂದು ಸಮಸ್ಯೆಯನ್ನು ಮುಂದಿಟ್ಟು, ಇಂಗ್ಲಿಷ್ ಮಾಧ್ಯಮದ ತಮ್ಮ ಬೇಡಿಕೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ಇದು ಕೆಲವರ 'ಪ್ರತಿಷ್ಠೆ'ಯನ್ನು ತೋರ್ಪಡಿಸಿಕೊಳ್ಳುವ ಒಂದು ಹವಣಿಕೆ ಮಾತ್ರ ಎಂಬ ಆರೋಪವನ್ನು ಅವರು ತಳ್ಳಿಹಾಕುತ್ತಾರೆ.

ಅವರು ಮುಂದಿಡುವ ಸಮಸ್ಯೆ ಹೀಗಿದೆ:

1)"ವೈದ್ಯಕೀಯ, ಇಂಜ್ನಿಯರಿಂಗ್‌ಗಳಂಥ ತಾಂತ್ರಿಕ ಶಿಕ್ಷಣ, ಐ.ಎ.ಎಸ್. ನಂಥ ಉನ್ನತ ಸ್ಪರ್ಧಾತ್ಮಕ ಪರೀಕ್ಷೆಗಳು ಮುಂತಾದವುಗಳಿಗೆ ಅತಿ ಹೆಚ್ಚಿನ ಮಟ್ಟದ ಇಂಗ್ಲಿಷ್ ಜ್ಞಾನ ಬೇಕಾಗುತ್ತದೆ. ಐ. ಎ. ಎಸ್. ನಲ್ಲಂತೂ ಇಂಗ್ಲೀಷೇ ನಿರ್ಣಾಯಕ ಪಾತ್ರ ವಹಿಸುತ್ತಿದೆ. ಹೈಸ್ಕೂಲ್‌ವರೆಗೆ ಕನ್ನಡ ಮಾಧ್ಯಮದಲ್ಲಿ ಓದಿ, ಇದ್ದಕ್ಕಿದ್ದಂತೆ ಇಂಗ್ಲೀಷ್ ಮಾಧ್ಯಮಕ್ಕೆ ಬದಲಾವಣೆಯಾದಾಗ ಎಷ್ಟೋ ವೇಳೆ ಒಳ್ಳೊಳ್ಳೆಯ ಬುದ್ಧಿವಂತ ವಿದ್ಯಾರ್ಥಿಗಳೇ ಹಿಂದೆ ಬಿದ್ದುಹೋಗುತ್ತಾರೆ. ಆದ್ದರಿಂದ ಇಂಗ್ಲಿಷ್ ಶಿಕ್ಷಣವನ್ನು ಶಿಶುವಿಹಾರದ ಮಟ್ಟದಿಂದಲೇ ಆರಂಭಿಸಿದರೆ ಒಳ್ಳೆಯ ಇಂಗ್ಲಿಷ್ ಜ್ಞಾನವನ್ನು ಮಕ್ಕಳಿಗೆ ಕೊಡಬಹುದು" ಎನ್ನುತ್ತಾರೆ.

ಅವರು ಮುಚ್ಚುಮರೆಯಿಲ್ಲದೆ ಇನ್ನೊಂದು ವಿಷಯ ಹೇಳುತ್ತಾರೆ– ಹೀಗೆ ಹಿಂದೆ ಬೀಳುವವರಲ್ಲಿ ಬ್ರಾಹ್ಮಣೇತರ ಸಮುದಾಯಗಳ ಮಕ್ಕಳದು ಬಹುದೊಡ್ಡ ಸಂಖ್ಯೆ. ಆದರಲ್ಲೂ ಇವರಿಗೆ ಮುಂದೆ ಮುಂದೆಹೋದಂತೆ ಅತಿ ಕಷ್ಟವಾಗುವುದು ಇಂಗ್ಲೀಷೇ ಆದ್ದರಿಂದ ಆರಂಭದಿಂದಲೇ ಇಂಗ್ಲೀಷ್‌ನಲ್ಲಿ ಶಿಕ್ಷಣ ಕೊಡಿಸಿದರಾದರೂ ಇವರ ಮಟ್ಟ ಸುಧಾರಿಸಬಲ್ಲದೆನ್ನುತ್ತಾರೆ ಅವರು.

ಸಮಸ್ಯೆಯ ತಿರುಳು

ಆದರೆ, ಹೀಗೆ ಕೆಲವು ಮಕ್ಕಳು ವಿದ್ಯಾಭ್ಯಾಸದಲ್ಲಿ ಹಿಂದೆ ಬೀಳಲು ಬರೀ ಇಂಗ್ಲಿಷ್ ಜ್ಞಾನದ ಕೊರತೆಯೇ ಮೂಲ ಕಾರಣವೆ? ಬ್ರಾಹ್ಮಣ ವಿದ್ಯಾರ್ಥಿಗಳು ಸಾಮಾನ್ಯ

ಇಂಗ್ಲಿಷ್ ಮಾಧ್ಯಮ ಶಿಶುವಿಹಾರ:

ಯಾವ ರೋಗಕ್ಕೆ ಯಾವ ಮದ್ದು

ನಿಯಮವೆಂಬಂತೆ ಪರೀಕ್ಷೆಗಳಲ್ಲಿ ಹೆಚ್ಚು ಸಫಲರಾಗಲು ಮುಖ್ಯ ಕಾರಣವೇನು?

ತಲೆ ತಲಾಂತರದಿಂದಲೂ ವಿದ್ಯೆ ಬ್ರಾಹ್ಮಣರ ವೃತ್ತಿ ಮಾತ್ರವಲ್ಲ ಸೊತ್ತೂ ಆಗಿದೆ. ರೈತನ ಮಕ್ಕಳು ಬೇಸಾಯದ ಕಸುಬುಗಳನ್ನು ಚಿಕ್ಕಂದಿನಿಂದಲೂ ಕಲಿಯುವಂತೆ ಬ್ರಾಹ್ಮಣರ ಮಕ್ಕಳಿಗೆ ಓದಿನವಿದ್ಯೆ ಕಲಿಯುವುದು ಬಹಳ ಸಹಜವಾದ ಅನಿವಾರ್ಯತೆಯೆಂಬಂತೆ ಬೆಳೆದು ಬಂದು ಇಂದಿಗೂ ಮುಂದುವರಿಯುತ್ತಿದೆ. ಹೀಗಾಗಿ ಮಕ್ಕಳ ಮನಸ್ಸನ್ನು ಚಿಕ್ಕಂದಿನಿಂದಲೂ ಓದಿನ ಕಡೆಗೆ ಪ್ರೇರೇಪಿಸಲಾಗುತ್ತದೆ, ಅವರಿಗೆ ಉತ್ತೇಜನ ಕೊಡಲಾಗುತ್ತದೆ ಹಾಗೂ ಸಾಮಾನ್ಯವಾಗಿ ಎಲ್ಲ ತಂದೆ–ತಾಯಿಗಳೂ ಅಷ್ಟಿಷ್ಟು ವಿದ್ಯಾವಂತರಾಗಿಯೇ ಇರುವುದರಿಂದ ಮಕ್ಕಳಿಗೆ ಮಾರ್ಗದರ್ಶನವೂ ಲಭಿಸುತ್ತದೆ

ಬೇರೆಯವರ ಮಕ್ಕಳಿಗೆ ಇಂಥ ಪ್ರೇರೇಪಣೆಯ ಸಿದ್ಧತೆ, ಉತ್ತೇಜನ, ಒತ್ತಾಯ, ಮಾರ್ಗದರ್ಶನಗಳು ಸಿಗದಿದ್ದ-ದ್ದೇ ಅಲ್ಲವೆ ಅವರು ಹಿಂದೆ ಬೀಳಲು ಕಾರಣ?

ಆದರೆ, ಈಚೆಗೆ ಈ ಪರಿಸ್ಥಿತಿ ಬದಲಾಗುತ್ತಿದೆ. ಈಗಿನ (ನಮ್ಮ) ತಲೆಮಾರಿನವರಲ್ಲಿ ಮುಖ್ಯವಾಗಿ ಒಕ್ಕಲಿಗರಲ್ಲಿ, ಎಲ್ಲ ಮನೆಗಳಲ್ಲೂ ವಿದ್ಯಾವಂತರಿದ್ದಾರೆ. ಇದರಿಂದ ಮುಂದಿನ ಪೀಳಿಗೆಗಳು ಖಂಡಿತ ವಿದ್ಯಾಭ್ಯಾಸದಲ್ಲಿ ಹಿಂದೆ ಬೀಳುವ ಪರಿಸ್ಥಿತಿಯಿರುವುದಿಲ್ಲ.

ಅಂದರೆ ಮಕ್ಕಳಿಗೆ ಉತ್ತೇಜನ, ಮಾರ್ಗದರ್ಶನಗಳ ಕೊರತೆಯಿಂದಾಗಿ ಅವರಲ್ಲಿ ಓದಿನ ಆಸಕ್ತಿ ತೀವ್ರವಾಗಿ ಬೆಳೆಯದೆ, ಇದರಿಂದ ಅವರು ಹಿಂದೆ ಬೀಳುವಂತಾಗುತ್ತದೆ ಎನ್ನಬಹುದು. ಹೀಗಿರುವಾಗ ಈ ಕೊರತೆ ನಿವಾರಣೆಯಾಗದೆ ಹಾಗೇ ಇದ್ದಾಗ ಇಂಗ್ಲೀಷ್ ಮಾಧ್ಯಮದ ಮೂಲಕ ಅವರ ಈ ಊನವನ್ನು (ಹ್ಯಾಂಡಿಕ್ಯಾಪ್) ಸರಿದೂಗಿಸುತ್ತೇವೆ (ಕಾಂಪೆನ್ಸೇಟ್) ಎಂದರೆ ಯಾರಾದರೂ ಯೋಚಿಸಬೇಕಾದ ಮಾತಾಗುತ್ತದೆ.

[ಹಾಗೊಂದು ವೇಳೆ ಇಂಗ್ಲಿಷ್ ಮಾಧ್ಯಮವೇ ಪರಿಹಾರವೆನ್ನುವುದಾದರೆ, ಅಲ್ಲಿ ಈ 'ಹಿಂದೆ ಬೀಳುವ' ಮಕ್ಕಳನ್ನು ಮಾತ್ರವೇ ಸೇರಿಸಿಕೊಳ್ಳಲು ಆಗುವುದಿಲ್ಲವಲ್ಲ. ಆಗ ಈ ಮಕ್ಕಳ ಸ್ಥಿತಿ ಸ್ವಲ್ಪ ಸುಧಾರಿಸಬಹುದಾದರೂ, ಸ್ಪರ್ಧಾ ಸಾಮರ್ಥ್ಯದ ವಿಷಯದಲ್ಲಿ ಈ ಅಂತರ ಹಾಗೇ ಉಳಿಯುತ್ತದಷ್ಟೆ!]

ಈ ಕೊರತೆಗಳ ಜೊತೆಗೆ ನಮ್ಮ ಇಡೀ ಶಿಕ್ಷಣ ಮಟ್ಟವೇ ಇಂದು ತೀವ್ರವಾಗಿ ಕುಸಿದಿರುವುದಲ್ಲದೆ, ಸಾರ್ವಜನಿಕ ಅಥವಾ ಸರ್ಕಾರಿ ಶಾಲೆಗಳಲ್ಲಿ ಪಾಠ-ಪ್ರವಚನಗಳ ಮಟ್ಟವೂ ಬಹಳ ಕುಂದಿರುವುದೂ ಸಹ ನಮ್ಮ ಮಕ್ಕಳ ಮಟ್ಟವು ಕಡಿಮೆಯಾಗಿರಲು ಕಾರಣವಾಗಿವೆ.

(ಕೇಂದ್ರ ಸರ್ಕಾರಿ ಅಧೀನದ ಕೇಂದ್ರೀಯ ವಿದ್ಯಾಲಯಗಳಲ್ಲಿ ಶಿಕ್ಷಣದ ಮಟ್ಟವನ್ನು ಬಹಳ ಹೆಚ್ಚಿಗೆ ಇಟ್ಟಿರುವುದಲ್ಲದೆ ಇಡೀ ದೇಶಕ್ಕೆ ಒಂದೇ ಪಾಠಕ್ರಮ ಅನುಸರಿಸಲಾಗುತ್ತಿದೆ. ಈ ಶಾಲೆಗಳಲ್ಲಿ ಕಲಿತವರೇ ಮುಂದೆ ಐ.ಎ.ಎಸ್., ಐ.ಎಫ್.ಎಸ್. ಮುಂತಾದವುಗಳಲ್ಲಿ ಆಯ್ಕೆಯಾಗುವುದು ಹೆಚ್ಚು ಎಂದು ಹೇಳಲಾಗುತ್ತದೆ.)

ಆದ್ದರಿಂದ ನಮ್ಮ ಮಕ್ಕಳ ಮಟ್ಟ ಸುಧಾರಿಸಬೇಕಾದರೆ ಅವರ ಮನಸ್ಸನ್ನು ವಿದ್ಯೆಯ ದಿಕ್ಕಿನಲ್ಲಿ ತೀವ್ರವಾಗಿ ಮಗ್ನಗೊಳಿಸುವಂತಹ ಪ್ರೇರಣೆ, ಮಾರ್ಗದರ್ಶನಗಳ ಜೊತೆಗೆ ಉತ್ತಮ ಬೋಧನಾ ವ್ಯವಸ್ಥೆ ಮತ್ತು ಸೌಕರ್ಯಗಳೂ ಅವಶ್ಯಕವಾಗುತ್ತವೆ.

ನಗರಗಳಲ್ಲಿ ಶೈಕ್ಷಣಿಕ ಸೌಕರ್ಯಗಳು, ವಿಪುಲವಾದ ಶೈಕ್ಷಣಿಕ ಚಟುವಟಿಕೆಗಳು— ಒಟ್ಟಿನಲ್ಲಿ ಒಂದು ರೀತಿಯಲ್ಲಿ ವಿಶಿಷ್ಟವಾದ ಶೈಕ್ಷಣಿಕ ವಾತಾವರಣವೇ ಇರುವುದರಿಂದ ವಿದ್ಯಾರ್ಥಿಗಳು ಈ ಎಲ್ಲ ಊನಗಳನ್ನೂ ತಕ್ಕಮಟ್ಟಿಗೆ ಮೀರಿ ಬೆಳೆಯಲು ಸಾಧ್ಯವಾಗುತ್ತದೆ.

ಆದ್ದರಿಂದ ಹಳ್ಳಿಗಾಡಿನಲ್ಲಿ ವಿದ್ಯಾಭ್ಯಾಸದ ಸೌಕರ್ಯ ಮತ್ತು ಬೋಧನಾ ಮಟ್ಟವನ್ನು ಉತ್ತಮಪಡಿಸುವುದೊಂದೇ ಮಾರ್ಗವಾಗುತ್ತದೆ.

"ಅಯ್ಯೋ, ಅದೆಲ್ಲ ಆಗಿ–ಹೋಗುವ ವೇಳೆಗೆ ನಮ್ಮ ನೂರಾರು ಮಕ್ಕಳು ಉತ್ತಮ ಶಿಕ್ಷಣ ಪಡೆಯುವ ತಮ್ಮ ಹಕ್ಕಿನಿಂದ ವಂಚಿತರಾಗಬೇಕೆ?" ಎಂದು ಕೇಳುತ್ತಾರೆ. ಅಂದರೆ ಈ ಎಲ್ಲ ಸೌಕರ್ಯ ಇತ್ಯಾದಿಗಳ ಬದಲು ಒಂದು ಉತ್ತಮ **ಒಳದಾರಿಯಾಗಿ** (ಶಾರ್ಟ್‌ಕಟ್) ಅವರಿಗೆ ಇಂಗ್ಲಿಷ್ ಮಾಧ್ಯಮ ಕಾಣುತ್ತದೆ. ಆದರೆ ಇಂಥ ವಿಷಯಗಳಿಗೆಲ್ಲ 'ಶಾರ್ಟ್‌ಕಟ್' ಮಾರ್ಗೋಪಾಯಗಳಿರುವುದಿಲ್ಲ ಎಂದು ನಾವು ತಿಳಿದಿರಬೇಕು.

ಇಂಗ್ಲಿಷ್ ಮಾಧ್ಯಮವೆಂದಕೂಡಲೇ ಎಲ್ಲಾ ಕೊರತೆಗಳೂ ನೀಗಿಕೊಳ್ಳುತ್ತವೆಯೆ? ಇದೇ ಹಿನ್ನೆಲೆಯ ಹುಡುಗರು ಅಲ್ಲೂ ಉತ್ತಮ ಮಟ್ಟ ಮುಟ್ಟದಿರಬಹುದಲ್ಲ? ಅಲ್ಲದೆ ಆರಂಭದಲ್ಲೇ ಇಂಗ್ಲಿಷಿಗೆ ಹೊಂದಿಕೊಳ್ಳಲಾರದೆ ಮುಗ್ಗರಿಸಬಹುದಲ್ಲ? ಎಂಬುದಕ್ಕೆ ಅವರ ಸಮಜಾಯಿಷಿ: "ಸ್ವಲ್ಪ ಹೆಚ್ಚು ಖರ್ಚುಮಾಡಿ ಇಂಗ್ಲಿಷ್ ಮಾಧ್ಯಮಕ್ಕೆ ಕಳಿಸಿದ ಬಿಸಿಯಿರುತ್ತಲ್ಲ, ಅದರಿಂದಾಗಿ ಪೋಷಕರು ಹೆಚ್ಚುವರಿ ಪಾಠ (ಟ್ಯೂಶನ್) ಹೇಳಿಸಿಯಾದರೂ ಮಕ್ಕಳನ್ನು ಬುದ್ಧಿವಂತರನ್ನಾಗಿ ಮಾಡಲು ಯತ್ನಿಸುತ್ತಾರೆ".

ಅಂದರೆ ಇಂಗ್ಲಿಷ್ ಮಾಧ್ಯಮವೆಂದಾಗ ಒಂದು ವೇಳೆ ಡೊನೇಶನ್ ಹೇರುವುದಿಲ್ಲವೆಂದರೂ ಸಹ, ಹೆಚ್ಚು ಖರ್ಚು, ಅದರ ಮೇಲೆ ಟ್ಯೂಶನ್ ಇತ್ಯಾದಿ–ಹೀಗೆ ದುಬಾರಿಯೇ. ಅಂದರೆ ಇದು ಖಂಡಿತ ಸಾಮಾನ್ಯ ಜನರಿಗೆ ಎಟಕುವಂಥದ್ದೇ? ಅಂದರೆ ಮಕ್ಕಳನ್ನು ಬಿ.ಇ., ಎಂ.ಬಿ.ಬಿ.ಎಸ್., ಐ.ಎ.ಎಸ್. ಮುಂತಾಗಿ ಮಾಡುವ ಕನಸು ಕಾಣಬಲ್ಲವರೂ ಕೆಲವರೇ. ಈ ಶಾಲೆ ತೆರೆಯುವುದೂ ಅವರಿಗಾಗಿಯೇ. ಉಳಿದ ಹೆಚ್ಚಿನವರಿಗೆ ಒಂದು ಕೃತಕ **ಪ್ರತಿಷ್ಠೆಯ ಪ್ರದರ್ಶನಕ್ಕೆ ಮಾತ್ರ ಇದು ಬೇಕು**. ಈ ಕೆಲವೇ ಪ್ರತಿಷ್ಠಿತರು ಮತ್ತು ಪ್ರತಿಷ್ಠೆಯ ಜನಗಳಿಗಾಗಿ, ಈಗಾಗಲೇ ಅನಿಷ್ಟವೆಂದು ದೂರ ಮಾಡಲು ಯತ್ನಿಸುತ್ತಿರುವ ಇಂಗ್ಲಿಷ್ ಮಾಧ್ಯಮವನ್ನು ಈ ಹಳ್ಳಿಗಳಿಗೂ ಹೊಕ್ಕಲು ಬಿಡಬೇಕು!

—ಎಷ್ಟು ರೀತಿಯಲ್ಲಿ, ಎಷ್ಟೇ ಸಹಾನುಭೂತಿಯಿಂದ ಯೋಚಿಸಿದರೂ ಇದಿಷ್ಟೇ ಕೊನೆಗೆ ಎದ್ದು ಕಾಣುತ್ತಿರುವ ಅಂಶ.

ಅನಿಷ್ಟ–ಇಂಗ್ಲಿಷ್ ಮಾಧ್ಯಮ ಹೊರತು ಇಂಗ್ಲಿಷ್ ಭಾಷೆಯಲ್ಲ

ಇಂಗ್ಲಿಷ್ ಭಾಷೆ ಒಂದು ಉತ್ತಮ ಸಂಪರ್ಕಭಾಷೆ, ಹೊರ ಜಗತ್ತನ್ನು ಅರಿಯಲು ನಮಗೊಂದು ಅತ್ಯುತ್ತಮ ಮಾಧ್ಯಮ ಎಂಬುದನ್ನು ಯಾರೂ ಅಲ್ಲಗಳೆಯುತ್ತಿಲ್ಲ.

ಆದರೆ, ಇಂಗ್ಲಿಷ್ ಈಗಾಗಲೇ ನಮ್ಮ ಸಮಾಜದಲ್ಲಿದ್ದ ಮೇಲು ಕೀಳಿನ ತಾರತಮ್ಯದ ಬೆಂಕಿಗೆ ಇನ್ನಷ್ಟು ತುಪ್ಪ ಸುರಿದು ಧಾಂಧಲೆ ಎಬ್ಬಿಸಿರುವ ಒಂದು ಅನಿಷ್ಟವೂ ಹೌದೆಂಬುದನ್ನೂ ನಾವು ಮರೆಯುವಂತಿಲ್ಲ. ಒಟ್ಟಿನಲ್ಲಿ ನಮ್ಮ ಪಾಲಿಗೆ ಇಂಗ್ಲಿಷ್ ಒಂದು ಔಷಧ ಅಥವಾ ಟಾನಿಕ್ಕಿನ ಸ್ಥಾನ ಪಡೆಯಬಹುದೇ ಹೊರತು ಅದೇ ಆಹಾರವಾಗದು.

ಆದ್ದರಿಂದ, ಕ.ನ. ಕೃಷ್ಣಮೂರ್ತಿಯವರು ಹೇಳಿದಂತೆ, ಕನ್ನಡ ಮಾಧ್ಯಮದ ಜೊತೆಗೆ ಆರಂಭದಿಂದಲೇ ಇಂಗ್ಲಿಷ್ ಭಾಷೆಯನ್ನೂ ಉತ್ತಮವಾಗಿ ಬೋಧಿಸುವ ವ್ಯವಸ್ಥೆಯೊಂದಿಗೆ, ಪಾಠಪ್ರವಚನಗಳು ಉತ್ತಮ ಮಟ್ಟದಲ್ಲಿರುವಂತೆ ವ್ಯವಸ್ಥೆಗೊಳಿಸಿ, ಅದಕ್ಕೆ ಪೂರಕವಾಗಿ ಮಕ್ಕಳಿಗೆ ಪ್ರೋತ್ಸಾಹ, ಮಾರ್ಗದರ್ಶನ ಕೊಟ್ಟರೆ ಅದೇ ಎಲ್ಲದಕ್ಕೂ ಸಾಕಾಗುತ್ತದೆ, ಅದೇ ಅತ್ಯುತ್ತಮ ಮಾರ್ಗವಾಗುತ್ತದೆ ಎಂದು ನನ್ನ ಖಚಿತ ಅಭಿಪ್ರಾಯ. ಆದಿಚುಂಚನಗಿರಿ ವಿದ್ಯಾಪೀಠದಂಥ ಒಂದು ಸಂಸ್ಥೆಗೆ ಇದೇನೂ ಅಸಾಧ್ಯದ ಮಾತಲ್ಲ. ಹೀಗೆ ಮಾಡುವುದರಿಂದ ಕೆಲವೇ ಕೆಲವು ಅನುಕೂಲಸ್ಥರ ಮಕ್ಕಳು ಮಾತ್ರ ಮುಂದುವರಿಯುವ ಬದಲು ಎಲ್ಲಾ ಮಕ್ಕಳೂ ಉತ್ತಮ ಮಟ್ಟ ಮುಟ್ಟುವುದು ಸಾಧ್ಯವಾಗುತ್ತದೆ.

[ಈ ಪ್ರಮುಖ ಸಮಸ್ಯೆಗೆ ತೆಕ್ಕೆ ಹಾಕಿರುವ ಇನ್ನಿತರ ಅಂಶಗಳಾದ— (1) ರಾಜ್ಯದಿಂದ ಹೊರಗಡೆಗೆ ಅಥವಾ ಸರ್ಕಾರಿ ಕನ್ನಡ ಶಾಲೆಗಳು ಏನೇನೂ ಚೆನ್ನಾಗಿಲ್ಲದ ಕಡೆಗಳಿಗೆ ವರ್ಗವಾಗುವ ಅಧಿಕಾರಿಗಳ ಮಕ್ಕಳಿಗೆ ತೊಂದರೆ; (2) ಇಂಗ್ಲಿಷ್ ಮಾಧ್ಯಮ ಬೇಕೆನ್ನುವ ಇಲ್ಲಿನ ಪೋಷಕರು ತಮ್ಮ ಮಕ್ಕಳನ್ನು ಭದ್ರಾವತಿಗೋ ಸಂಗಮೇಶ್ವರಪೇಟೆಗೋ ಇನ್ನೆಲ್ಲಿಗೋ ಕಳಿಸುತ್ತಿದ್ದಾರೆ. ಅದರ ಬದಲು ಇಲ್ಲೇ ಶಾಲೆ ಮಾಡಬಹುದಲ್ಲ?; (3) ನಾವು ತೆರೆಯದಿದ್ದರೂ ತಮಿಳು ಮಲಯಾಳಿ, ಮುಸ್ಲಿಂ, ಕ್ರೈಸ್ತ ಮುಂತಾದ ಯಾರಾದರೂ 'ಅಲ್ಪ ಸಂಖ್ಯಾತರು' ಈಗಿನ ಸರ್ಕಾರದ ನೀತಿಯ ದುರ್ಲಾಭ ಪಡೆದು ಇಂಗ್ಲೀಷ್ ಮಾಧ್ಯಮ ಶಾಲೆ ತೆರೆದರೆ ಆಗ ನಾವೇ ಅವರಿಗೆ ಡೊನೇಶನ್ ಸುರಿಯಬೇಕಾಗುತ್ತದಲ್ಲ— ಮುಂತಾದವುಗಳ ಬಗ್ಗೆ ಹೆಚ್ಚಿಗೆ ಹೇಳುವ ಅಗತ್ಯವಿಲ್ಲವೆನ್ನಿಸುತ್ತದೆ.]

—ಸಿರಿಮನೆ ನಾಗರಾಜ

(ಈ ವಿಚಾರಗಳ ಬಗ್ಗೆ ಓದುಗರಿಂದ ಗಂಭೀರವಾದ ಚರ್ಚೆ ಆಹ್ವಾನಿಸುತ್ತೇವೆ.

—ಸಂ.

ಓದುಗರ ಪತ್ರಗಳು

“ಬೇರೆಲ್ಲ ಕಡೆಯ ಮೌಲ್ಯಗಳ ಅಧಃಪತನ ಶಿಕ್ಷಣ ರಂಗಕ್ಕೂ ಹಬ್ಬಿದೆ”

ನನ್ನನ್ನು ಇತ್ತೀಚೆಗೆ ಗಾಢವಾಗಿ ಕಾಡುತ್ತಿರುವ ಒಂದು ವಿಷಯವನ್ನು 'ಮುಂಜಾವು' ಓದುಗರೊಂದಿಗೆ ಹಂಚಿಕೊಳ್ಳಬಯಸುತ್ತೇನೆ, ಆ ಮೂಲಕ ನನ್ನ ಮನಸ್ಸನ್ನು ಸ್ವಲ್ಪ ಹಗುರ ಮಾಡಿಕೊಳ್ಳುತ್ತಿದ್ದೇನೆ.

ಆಗಾಗ್ಗೆ ನಾವು ಇಂದಿನ ಪರೀಕ್ಷೆಗಳಲ್ಲಿ ನಡೆಯುವ ಅಕ್ರಮಗಳ ಕುರಿತು ಕೇಳುತ್ತಿರುತ್ತೇವೆ ಅಥವಾ ಓದುತ್ತಿರುತ್ತೇವೆ. ಇಂದಿನ ಪರೀಕ್ಷಾ ಪದ್ಧತಿ ಅತ್ಯಂತ ಕಲುಷಿತಗೊಂಡು ಭ್ರಷ್ಟತೆಯ ಆಗರವಾಗಿಬಿಟ್ಟಿದೆ. ಒಬ್ಬ ವಿದ್ಯಾರ್ಥಿ ಕಲಿತಿದ್ದನ್ನು ಮೌಲ್ಯಮಾಪನ ಮಾಡುವ, ಆತನ ಸಾಧನೆಗಳನ್ನು ಒರೆಗೆ ಹಚ್ಚಬೇಕಾದ ಪರೀಕ್ಷೆಗಳು ಇಂದು ತನ್ನ ಮೂಲ ಉದ್ದೇಶಗಳನ್ನು ಸಂಪೂರ್ಣವಾಗಿ ಕಳೆದುಕೊಂಡುಬಿಟ್ಟಿವೆ. ಚೆನ್ನಾಗಿ ಅಭ್ಯಾಸ ಮಾಡಿದ ಒಬ್ಬ ವಿದ್ಯಾರ್ಥಿಗಿಂತ, ಏನೂ ಅಭ್ಯಾಸಮಾಡದೆ ತಿರುಗೂಳಿಯಾಗಿ, ಉಂಡಾಡಿಯಾಗಿ ಕಾಲ ಕಳೆದ ವಿದ್ಯಾರ್ಥಿ ಇವತ್ತಿನ ಈ ಪರೀಕ್ಷೆಗಳಲ್ಲಿ 'ಮೇಲೆ'ನ್ನಿಸುತ್ತಿದ್ದಾನೆ. ಪ್ರಾಮಾಣಿಕವಾಗಿ ಅಭ್ಯಾಸ ಮಾಡಿದ ವಿದ್ಯಾರ್ಥಿ ಪರೀಕ್ಷೆಯಲ್ಲಿ ಕೇವಲ ಪಾಸಾದರೆ, ಅಕ್ರಮ ಮಾರ್ಗಗಳ ಮೂಲಕ ಏನೂ ಅರ್ಹತೆಯಿಲ್ಲದ ವಿದ್ಯಾರ್ಥಿ ಶ್ರೇಣಿಯೊಂದಿಗೆ ಪಾಸಾಗುವಂತಹ ದುರಂತವನ್ನು ನಾವು ಕಾಣುತ್ತಿದ್ದೇವೆ.

ಇಷ್ಟೇ ಅಲ್ಲ—ಚೀಟಿಗಳನ್ನು ತರುವುದು, ಇನ್ನೊಬ್ಬನನ್ನು ಕೇಳಿ ಬರೆಯುವುದು, ಕಾಪಿ ಹೊಡೆಯುವುದು ತಮ್ಮ ಆಜನ್ಮಸಿದ್ಧ ಹಕ್ಕು ಎಂಬಂತೆ ಇಂದಿನ ವಿದ್ಯಾರ್ಥಿಗಳು ಭಾವಿಸತೊಡಗಿದ್ದಾರೆ— ಹಾಗೆಯೇ ವರ್ತಿಸುತ್ತಿದ್ದಾರೆ. ಇದಕ್ಕೆ ಅವಕಾಶಕೊಡದಿರುವುದೇ ಒಂದು ಅಪರಾಧವಾಗಿಬಿಡುವ, ಹಾಗೆ ಕರ್ತವ್ಯ ನಿರ್ವಹಿಸಿದವನೇ ಅಪರಾಧಿಯಾಗುವ ಒಂದು ದುಷ್ಟ ಹಂತಕ್ಕೆ ವಿದ್ಯಾರ್ಥಿಗಳು ತಲುಪಿದ್ದಾರೆ.

ಇದಕ್ಕೆ ಕಾರಣಗಳೇನು? ನನ್ನ ಅನಿಸಿಕೆಗಳನ್ನು ಇಲ್ಲಿ ನಿಮ್ಮ ಮುಂದಿಡುತ್ತಿದ್ದೇನೆ.

ಒಂದನೆಯದು:— ನಮ್ಮ ಒಟ್ಟು ಸಮಾಜದಲ್ಲಿ ಮೌಲ್ಯಗಳ ಪತನ. ಸಮಾಜದ ಎಲ್ಲ ರಂಗಗಳಲ್ಲೂ ಕಾಣುತ್ತಿರುವ ನೈತಿಕ ಅಧಃಪತನ ಶಿಕ್ಷಣ ರಂಗದಲ್ಲೂ ತನ್ನ ಪರಿಣಾಮಗಳನ್ನು ಬೀರಿದೆ. ಹೇಗಾದರೂ ಹಣ ಮಾಡುವ, ಹೆಸರು ಮಾಡುವ, ಸಾಧನೆ ಮಾಡದೆ ಫಲವನ್ನು ಉಣ್ಣಬೇಕೆನ್ನುವ ಪ್ರವೃತ್ತಿ ಎಲ್ಲ ರಂಗಗಳಂತೆ ಶಿಕ್ಷಣ ರಂಗದಲ್ಲೂ ಕಾಣಿಸುತ್ತಿದೆ.

ಎರಡನೆಯದು:—ಇಂದಿನ ಕೆಲವರು ಅಧ್ಯಾಪಕರು. ತನ್ನ ವಿದ್ಯಾರ್ಥಿ ಜೀವನದಲ್ಲಿ ನೈತಿಕ ಮೌಲ್ಯಗಳನ್ನು ಹರಾಜು ಹಾಕಿದ,

ಒಂದು ಚಿಂತನೆ

ಅಕ್ರಮ ಮಾರ್ಗಗಳಿಂದಲೇ ಪರೀಕ್ಷೆಯಲ್ಲಿ ಪಾಸಾದ, ಡಿಗ್ರಿ ಪಡೆದ ವ್ಯಕ್ತಿಗಳೇ ಅಧ್ಯಾಪಕರಾದರೆ ಅವರಿಂದ ಎಂತಹ ನೈತಿಕ ಮಾರ್ಗದರ್ಶನವನ್ನು ನಿರೀಕ್ಷಿಸಬಹುದು? ಇಂದು ಕೆಲವು ಅಧ್ಯಾಪಕರೇ ವಿದ್ಯಾರ್ಥಿಗಳು ಅಕ್ರಮ ಮಾರ್ಗಗಳಿಗೆ ಒಲಿಯಲು ಕಾರಣರಾಗಿದ್ದಾರೆ. ಪ್ರಾಮಾಣಿಕವಾಗಿ ಬದುಕಿ, ನೈತಿಕ ಮೌಲ್ಯಗಳನ್ನು ಎತ್ತಿ ಹಿಡಿಯುತ್ತೇನೆ ಎಂಬೆಲ್ಲ ಆದರ್ಶಗಳೊಂದಿಗೆ ಬಂದ ಕೆಲವೇ ಅಧ್ಯಾಪಕರಿಗೂ ಸ್ವಲ್ಪಸಮಯದಲ್ಲೇ ಪೂರ್ಣ ಭ್ರಮನಿರಸನವಾಗುತ್ತದೆ. ತಾನಿಲ್ಲಿ ಮಾಡಬಹುದಾದ್ದು ಏನೂ ಇಲ್ಲ, ತನ್ನಿಂದ ಏನು ಮಾಡಲೂ ಸಾಧ್ಯವಿಲ್ಲ ಎಂಬ ನಗ್ನ ಸತ್ಯದ ಅರಿವಾದೊಡನೆ, ಒಂದೋ ಅನ್ಯಾಯಗಳಿಗೆ ಮೂಕ ಸಾಕ್ಷಿಯಾಗಿ ಜಡವಾಗುತ್ತಾರೆ, ಇಲ್ಲವೇ ಈ ಕ್ಷೇತ್ರವನ್ನೇ ಬಿಟ್ಟುಬಿಡುತ್ತಾರೆ. ಪ್ರವಾಹದ ವಿರುದ್ಧ ಈಜುತ್ತೇನೆಂದು ಯಾರಾದರೊಬ್ಬ ಹೊರಟರೂ ಅವನ ಬದುಕು ದುರಂತ ಕಥೆಯಾಗಿಬಿಡುತ್ತದೆ.

ಮೂರನೆಯದು: ಪೋಷಕರು. ವರ್ಷವಿಡಿ ತಮ್ಮ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಗಮನವನ್ನೇ ಕೊಡದೆ, ಫಲಿತಾಂಶದ ಸಮಯದಲ್ಲಿ ಮಾತ್ರ ತಮ್ಮ ಮಕ್ಕಳು ಪಾಸಾಗಬೇಕೆಂಬ ಮನೋಭಾವ ನಮ್ಮ ವಿದ್ಯಾವಂತ ಪೋಷಕರಲ್ಲೂ ನೆಲೆಸಿರುವುದು ದುರದೃಷ್ಟಕರ. ಹಾಗೆ ಹೇಳುವುದಾದರೆ ಈ ಮನೋಭಾವ ವಿದ್ಯಾವಂತ ಪೋಷಕರಲ್ಲೇ ಜಾಸ್ತಿ. ಕೊನೆಗೆ ಯಾವುದೇ ಅಕ್ರಮ ಮಾರ್ಗಗಳಿಂದಾದರೂ ತಮ್ಮ ಮಕ್ಕಳು ಪಾಸಾಗುವಂತೆ ಪ್ರಯತ್ನಿಸುವ ಪೋಷಕರಿಗೂ ನಮ್ಮಲ್ಲಿ ಕೊರತೆಯಿಲ್ಲ. ಅಂಥವರಲ್ಲಿ ಹಲವರು ಯಶಸ್ವಿಯೂ ಆಗಿಬಿಡುತ್ತಾರೆ. ಆದರೆ ಇಂಥ ಒಂದು ಘಟನೆ ವಿದ್ಯಾರ್ಥಿಗಳ ಮನೋಧರ್ಮವನ್ನೇ ಬದಲಾಯಿಸಿಬಿಡಬಲ್ಲುದು. ಕಷ್ಟಪಟ್ಟು ಓದುವ ಅರ್ಹ ವಿದ್ಯಾರ್ಥಿಗಳಿಗೆ ಹತಾಶೆ ಆವರಿಸಿದರೆ, ಇನ್ನು ಕೆಲವರಿಗೆ ತಾವು ಓದದಿದ್ದರೂ ಪಾಸಾಗಬಹುದೆಂಬ ಭಂಡ ಧೈರ್ಯ ಬರುತ್ತದೆ. ಹೀಗೆ ನೈತಿಕವಾಗಿ ಪ್ರಪಾತಕ್ಕಿಳಿದು, ಸೂಕ್ಷ್ಮ ಸಂವೇದನೆಗಳನ್ನು, ಮೌಲ್ಯ ಪ್ರಜ್ಞೆಯನ್ನು ಕಳೆದುಕೊಂಡು ಪಶುಗಳ ಮಟ್ಟಕ್ಕಿಳಿದ ವಿದ್ಯಾರ್ಥಿಗಳು

(4ನೇ ಪುಟಕ್ಕೆ)

ಕುಸಿದ ಶಾಲೆ ದುರಸ್ತಿ: ಭರವಸೆ ಪೊಳ್ಳಾಗದಿರಲಿ

ಮಾನ್ಯರೆ,

ಕಳೆದ ವರ್ಷದ ಜೂನ್ 17 ರಂದು ಬಿದರಗೋಡಿನ ಹಿ॥ಪ್ರಾ॥ ಶಾಲೆಯು, 2 ವರ್ಷಗಳಷ್ಟು ಹಳೆಯದಾದ ಕೊಠಡಿ ಕುಸಿದು ಬಿದ್ದಿತು. ಅಂದು ಭಾನುವಾರವಾದ್ದರಿಂದ ಯಾರಿಗೂ ಅಪಾಯವಾಗಲಿಲ್ಲ. ಅದಕ್ಕಿಂತ ಹಿಂದಿನಿಂದಲೂ ಅದನ್ನು ಹಲವು ಬಾರಿ ಪರಿಶೀಲಿಸಿದ್ದ ತೀರ್ಥಹಳ್ಳಿ ಬಿಇಒ ಅದು ಬಿದ್ದಾಗಲೂ ಭೇಟಿ ಕೊಟ್ಟು ಖುದ್ದು ಕಂಡಿದ್ದರು. ಮತ್ತೂ ಯಾರ್‍ಯಾರೋ ಭೇಟಿ ಕೊಟ್ಟಿದ್ದರು. ಶೀಘ್ರ ದುರಸ್ತಿಯ ಭರವಸೆಗಳೂ ಬಂದಿದ್ದವು.

ಆದಾಗಿ ಈಗ ಒಂದು ವರ್ಷವಾದರೂ ಕಟ್ಟಡ ಇನ್ನೂ ರಿಪೇರಿಯಾಗಿಲ್ಲ. ಈ ಅವಧಿಯಲ್ಲಿ (ಮಳೆಗಾಲದ ಹೊರತು) ಇಡೀ ವರ್ಷ ಮಕ್ಕಳು ಕಟ್ಟದ ಚಪ್ಪರದಲ್ಲೇ ಪಾಠ ಕೇಳಿದರು. ಅವರ ಈ ಅವಸ್ಥೆ ನೋಡಿದರೆ ರವೀಂದ್ರರ ಶಾಂತಿ ನಿಕೇತನ ನೆನೆದು ಸಮಾಧಾನ ತಂದುಕೊಳ್ಳಬೇಕಾಗುತ್ತಿತ್ತು.

ಈ ಶಾಲೆಗೆ ಈಚೆಗೆ ಸಚಿವ ಗೋವಿಂದ ಗೌಡರು ಭೇಟಿ ನೀಡಿದರು. ಎಂದಿನ ವಾಡಿಕೆಯಂತೆ, ಈ ಕೂಡಲೇ ಸರಿ ಮಾಡಿಸಿ ಕೊಡುವ ಭರವಸೆಯನ್ನೂ ಕೊಟ್ಟಿದ್ದಾರೆ.

ಈ ಆಶ್ವಾಸನೆ ಈಗಲಾದರೂ ನೆರವೇರಬೇಕು; ಅಧಿಕಾರಿಗಳ, ರಾಜಕಾರಣಿಗಳ **“ಎಂದಿನ ವಾಡಿಕೆಯಂತೆ”** ಹುಸಿಯಾಗಬಾರದು— ಎಂದು ಊರವರ ಸಕಾರಣವಾದ ನಿರೀಕ್ಷೆಯಾಗಿದೆ.

—**ರಮೇಶ್ ಎಸ್.** ಬೇಗಾರು.

ಲೋಕೋಪಯೋಗಿ ಮಂತ್ರಿಗಳ ಆಶ್ವಾಸನೆ ಒಂದೇ ಕಂತಿನಲ್ಲಿ ಈಡೇರಲಿ

ಮಾನ್ಯರೆ,

ಕೊಪ್ಪ—ಕೆಸವೆ ರಸ್ತೆಗೆ ಟಾರು ಹಾಕುವ ವಿಷಯದಲ್ಲಿ ಲೋಕೋಪಯೋಗಿ ಇಲಾಖಾ ಮಂತ್ರಿ ಹೆಚ್. ಡಿ. ದೇವೇಗೌಡರ ಆಶ್ವಾಸನೆಯ ಬಗ್ಗೆ ಕೆಸವೆ ಗ್ರಾಮಸ್ಥರ ಪತ್ರ ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾದ ನಂತರ, ಸಚಿವರು ಆಶ್ವಾಸನೆ ಕೊಟ್ಟಂತೆ 6 ಕಿ.ಮೀ. ಅಲ್ಲದಿದ್ದರೂ ಸುಮಾರು 1 ಕಿ.ಮೀ. ದೂರಕ್ಕೆ ಈಚೆಗೆ ಟಾರು ಆಗಿದೆ.

ಸಾರ್ವಜನಿಕ ಮುಖಂಡರ ಗಮನವನ್ನು ನಮ್ಮ ಗ್ರಾಮದಂಥ ಹಿಂದುಳಿದ ಗ್ರಾಮಗಳ ಅಭಿವೃದ್ಧಿಯ ಬಗ್ಗೆ ಸೆಳೆಯಲು ನಮ್ಮ ಪಾಲಿಗೆ ನಿಮ್ಮ ಪತ್ರಿಕೆ ಒಂದು ಉತ್ತಮ ಮಾಧ್ಯಮವಾಗಿದೆ. ಮೇಲ್ಕಂಡ ವಿಚಾರವನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ, ಆಶ್ವಾಸನೆಯ ಸ್ವಲ್ಪ ಭಾಗವಾದರೂ ಕಾರ್ಯರೂಪಕ್ಕೆ ಬರುವಂತಾದುದಕ್ಕೆ ನಿಮಗೆ ಗ್ರಾಮಸ್ಥರೆಲ್ಲರ ಅಭಿನಂದನೆಯಿದೆ.

ಸಚಿವ ದೇವೇಗೌಡರು ಈಗ ಪುನಃ ಲೋಕೋಪಯೋಗಿ ಇಲಾಖೆಯಲ್ಲೇ ಮಂತ್ರಿಗಳಾಗಿದ್ದಾರೆ. ಅಲ್ಲದೆ ನಮ್ಮ ಕ್ಷೇತ್ರದ ಶಾಸಕರಾದ ಗೋವಿಂದ ಗೌಡರೂ ಕೂಡಾ ಈಗ ಮಂತ್ರಿಗಳಾಗಿದ್ದಾರೆ. ಆದ್ದರಿಂದ ಈ ಹಿಂದೆ ನಮ್ಮ ರಸ್ತೆಯ ಮುಸರೀ ಹಳ್ಳ ಸೇತುವೆ ಉದ್ಘಾಟನೆಯ ಸಂಧರ್ಭದಲ್ಲಿ ಕೊಟ್ಟ ಭರವಸೆಯಲ್ಲಿ ಉಳಿದ 5 ಕಿ. ಮೀ. ರಸ್ತೆಗೆ ಟಾರು ಹಾಕಿಸುವುದು ಈ ವರ್ಷವೇ, ಅಂದರೆ 1985–86 ನೇ ಸಾಲಿನಲ್ಲಿಯೇ ಆಗುವಂತೆ ಮಾಡಲು ಉಭಯ ಮಂತ್ರಿಗಳೂ, ಲೋಕೋಪಯೋಗಿ ಇಲಾಖಾ ಅಧಿಕಾರಿಗಳೂ ತಕ್ಷಣ ಕಾರ್ಯತತ್ಪರರಾಗ ಬೇಕಾಗಿ ಕೋರುತ್ತೇವೆ.

—ಗ್ರಾಮಸ್ಥರು,
ಕೆಸವೆ, ಕೊಪ್ಪ ತಾ॥

ಬೊಂಬಾಯಿಯಲ್ಲಿ ಅಚ್ಚ ಮಲೆನಾಡಿಗನ ಚಿತ್ರಕಲಾ ಪ್ರದರ್ಶನ



ಶೃಂಗೇರಿಯ ಅಚ್ಚ ಮಲೆನಾಡಿಗರಾದ ಖ್ಯಾತ ಕಲಾವಿದ ವಿ. ಆರ್. ಸಿ. ಶೇಖರ್ ಮತ್ತೊಮ್ಮೆ ಬೊಂಬಾಯಿಯಲ್ಲಿ ತಮ್ಮ ಜಲವರ್ಣ ಕಲಾಕೃತಿಗಳ ಪ್ರದರ್ಶನ ಏರ್ಪಡಿಸಿದ್ದಾರೆ.

ಈ ಬಾರಿಯ ಪ್ರದರ್ಶನದ ವಿಷಯ (ಥೀಮ್) “ಶೃಂಗಗಿರಿ” ಎಂದಾಗಿದ್ದು, ಶೃಂಗೇರಿಯ ಸುತ್ತಮುತ್ತಲ ರಮಣೀಯ ನಿಸರ್ಗದ 25 ಜಲವರ್ಣ ಚಿತ್ರಗಳನ್ನು ಪ್ರದರ್ಶಿಸಲಿದ್ದಾರೆಂದು ತಿಳಿದು ಬಂದಿದೆ.

ಪ್ರದರ್ಶನ ಜಹಾಂಗೀರ್ ಆರ್ಟ್ ಗ್ಯಾಲರಿ, ಎಂ. ಜಿ. ರಸ್ತೆ, ಬೊಂಬಾಯಿ–ಇಲ್ಲಿ ಮೇ 20 ರಿಂದ 26 ರವರೆಗೆ ನಡೆಯುತ್ತದೆ.

1979 ರಿಂದಲೂ ದೆಹಲಿ, ಬೊಂಬಾಯಿ, ಮದ್ರಾಸ್, ಬೆಂಗಳೂರು, ಚಂಡೀಘಡ, ಅಮೃತಸರ ಮುಂತಾಗಿ ದೇಶದ ಪ್ರಮುಖ ಕಲಾ ಕೇಂದ್ರಗಳಲ್ಲಿ ಪ್ರದರ್ಶನ ಏರ್ಪಡಿಸಿರುವ ಅಥವಾ ಅಲ್ಲಿನ ಪ್ರದರ್ಶನಗಳಲ್ಲಿ ಭಾಗವಹಿಸಿರುವ ಶೇಖರ್ ಅವರ ವರ್ಣ ಚಿತ್ರಗಳು ದೇಶದ ವಿವಿಧೆಡೆಗಳ ಮ್ಯೂಸಿಯಂಗಳಲ್ಲಿ ಸಂಗ್ರಹಿಸಲ್ಪಟ್ಟಿವೆ. ಅವರ ಪ್ರದರ್ಶನಗಳನ್ನು ವಿಮರ್ಶಿಸಿರುವ ಬೆಂಗಳೂರು, ಮದ್ರಾಸು, ಬೊಂಬಾಯಿ ಮುಂತಾದೆಡೆಗಳ ಪತ್ರಿಕೆಗಳು ಜಲವರ್ಣ ಮಾಧ್ಯಮದಲ್ಲಿನ ಅವರ ಪ್ರೌಢಿಮೆಯನ್ನು ಗುರುತಿಸಿರುವುದಲ್ಲದೆ, ನಿಸರ್ಗದ ದೃಶ್ಯಗಳನ್ನು ಆತ್ಮೀಯವಾಗಿ ಚಿತ್ರಿಸುವ ಅವರ ಶೈಲಿಯನ್ನು ಹೊಗಳಿವೆ.

ಅವರ ಈ ಕಲಾಪ್ರದರ್ಶನವೂ ಯಶಸ್ವಿಯಾಗಲೆಂದು 'ಮುಂಜಾವು' ಹಾರೈಸುತ್ತದೆ.

ಒಂದು ಮನವಿ

ಈ ವರ್ಷ ನಮ್ಮ ಚಂದಾ ಸಂಗ್ರಹ ಬಹು ಮಟ್ಟಿಗೆ ಉತ್ತಮವಾಗಿಯೇ ಇದೆ. ಯಾದರೂ ಚಂದಾ ಬಾಕಿಯಿರುವವರ ಸಂಖ್ಯೆಯೂ ಇನ್ನೂ ಸಾಕಷ್ಟಿದೆ. ಬಹುಪಾಲು ಎಲ್ಲರಿಗೂ ಈಗಾಗಲೇ ಬಾಕಿ ಎಷ್ಟಿದೆಯೆಂದು ತಿಳಿಸಿಯಾಗಿದೆ (ಕಾರ್ಡ್ ಮುಖಾಂತರ ಅಥವಾ ನಾನೇ ಹೋದಾಗ.) ಈ ಪೈಕಿ ಚಂದಾ ಕೊಡಲಾರೆವೆಂದು ಅಥವಾ ಪತ್ರಿಕೆ ಬೇಡವಾದವರು ಯಾರೂ ಇದ್ದಂತಿಲ್ಲ. (ಹೆಚ್ಚಿನವರು ಪತ್ರಿಕೆ ಹೊಗಳಿರುವವರೇ [illegible] ತು ಯಾರೂ ಬೇಡವೆಂದು ನಮಗೆ ತಿಳಿಸಿಲ್ಲ.)

ಇನ್ನೂ ಬಹಳ ಕಾಲ ಚಂದಾ ಬಾರದೆ ಪತ್ರಿಕೆ ಕಳಿಸುತ್ತಿರಲು ಸಾಧ್ಯವೇ [illegible] ಚಿಸಿ. ಎರಡೋ ಮೂರೋ ವರ್ಷದ ಚಂದಾ ಕೊಡದಿದ್ದುದಕ್ಕೆ [illegible] ನಿಂತು ಹೋಗುವುದು ಗೌರವದ ವಿಷಯವೇ?

—ಸಿರಿಮನೆ ನಾಗರಾ

ಬೆಂಡೆಹಕ್ಲು-ಮೇಗೂರುರಸ್ತೆ: ಖರ್ಚಾಗಿರುವುದು 18ಸಾವಿರ

ಕಲ್ಲುಗುಡ್ಡೆ: ಜಯಪುರ ಹೋಬಳಿಯ ಬೆಂಡೆಹಕ್ಲು–ಮೇಗೂರು ರಸ್ತೆ 80 ಸಾವಿರ ರೂ. ವೆಚ್ಚದಲ್ಲಿ ಪೂರ್ಣವಾಗಿದೆ ಎಂದು ಸಚಿವ ಗೋವಿಂದ ಗೌಡರು ಹೇಳಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಆದರೆ 1 ಕಿ.ಮೀ. ರಸ್ತೆ ಮಾತ್ರ ಪೂರ್ಣವಾಗಿದ್ದು, ಇದಕ್ಕೆ ಕೇವಲ 18 ಸಾವಿರ ರೂ. ಮಾತ್ರ ಖರ್ಚಾಗಿರುವುದಾಗಿಯೂ ಮೇಲ್ಕಂಡ ವರದಿ ತಪ್ಪಾಗಿದೆಯೆಂದೂ ಗೌಡರು ಗ್ರಾಮಸ್ಥರಿಗೆ ತಿಳಿಸಿರುವುದಾಗಿ ಬೆಂಡೆಹಕ್ಲು ನಾಗರಿಕರು ತಿಳಿಸಿದ್ದಾರೆ.

ಹಳ್ಳಿ ಅಂಚೆ ವಿತರಣೆ ಸಿಬ್ಬಂದಿಯವರೊಂದಿಗೆ..

ಹಲವು ಹಳ್ಳಿಗಳ ಕಡೆ ಅಂಚೆ ಬಟವಾಡೆ ಏನೂ ಸರಿಯಿಲ್ಲವೆಂದು ನಮಗೆ ಪತ್ರಗಳು ಬರುತ್ತಲೇ ಇರುತ್ತವೆ. ನಮ್ಮ ಪತ್ರಿಕೆಯ ಸ್ಥಿತಿಯೂ ಇದಕ್ಕಿಂತ ಭಿನ್ನವಾಗೇನೂ ಇಲ್ಲ. ಅಂಚೆ ವಿಳಂಬದಿಂದ ಹಲವು ವೇಳೆ ಬಹಳ ವಿಷಾದಕರ ಸಂದರ್ಭಗಳುಂಟಾಗುವುದೂ ಇದೆ.

ಇಂಥ ಹೆಚ್ಚಿನ ಪ್ರಕರಣಗಳಲ್ಲಿ "ಪೋಸ್ಟ್ ಮ್ಯಾನ್ ಸರಿಯಾಗಿ ತಲುಪಿಸುವುದಿಲ್ಲ" ಎಂಬುದೇ ಆರೋಪ. "ಅವನಿಗೇನೂ ಈ ಉದ್ಯೋಗ ಬೇಕಾಗಿಲ್ಲವಂತೆ. ಹಾಗಾಗಿ ದೂರು ಕೊಡುತ್ತಾರೆಂಬ ಭಯವೂ ಇಲ್ಲ" ಎನ್ನುತ್ತಾರೆ.

ಎಂಟು–ಹತ್ತು–ಹನ್ನೆರಡು ಮೈಲಿ ಸುತ್ತಳತೆಯಲ್ಲಿ, ಅದೂ ಈ ಮಲೆನಾಡಿನಲ್ಲಿ, ಅಂಚೆ ಹಂಚುವುದು ಸುಲಭದ್ದೇನೂ ಅಲ್ಲ. ಅದಕ್ಕೆ ಸಿಗುವ 'ಮೂರು ಕಾಸಿನ' ಪ್ರತಿಫಲದಿಂದಾಗಿ 'ಈ ಉದ್ಯೋಗ ಯಾರಿಗೆ ಬೇಕು' ಎಂದು ಅನ್ನಿಸುವುದೂ ತಪ್ಪಲ್ಲ. ಆದರೆ ಹಾಗೆಂದು. ಊರಲ್ಲೇ ಇದ್ದು ಮಾಡಬಹುದಾದ ನೂರೈವತ್ತೋ ನೂರರವತ್ತೋ ರೂಪಾಯಿ ಸಂಬಳದ ಕೆಲಸವಾದರೂ ಪೂರ್ತಿ ಬೇಡಾಗಿರುವವರೂ ಯಾರೂ ಇಲ್ಲ. ಆದ್ದರಿಂದ ನಿಮ್ಮ ಬೇಸರ ನಿಮ್ಮಂತೆಯೇ ಅಥವಾ ನಿಮಗಿಂತಲೂ ಕಷ್ಟದಲ್ಲಿರುವವರ ಅಂಚೆ ಪತ್ರಗಳ ಮೇಲೆ ತೀರಬಾರದು. ನಿಮ್ಮ ಪರಿಸ್ಥಿತಿ ಸುಧಾರಣೆಗೆ ನಿಮ್ಮ ಹೋರಾಟ ಇಲಾಖೆಯ ಕಲ್ಲು ಹೃದಯದ ವಿರುದ್ಧ ಹೊರತು ಅಂಚೆ ಬಳಸುವ ಸಾಮಾನ್ಯ ಜನರ ವಿರುದ್ಧ ಅಲ್ಲ.

—ಸಂಪಾದಕ.

'ಮುಂಜಾವು' ವಾರ್ಷಿಕಚಂದಾ 20ರೂ.

ಶಿಕ್ಷಣ ರಂಗದಲ್ಲೂ ಮೌಲ್ಯಗಳ ಅಧಃಪತನ

(ಮೂರನೇ ಪುಟದಿಂದ)

ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದ ಅಧ್ಯಾಪಕನಿಗೇ ರೋಪು ಹಾಕುವ ನೀಚ ಕೆಲಸಕ್ಕೂ ಇಳಿಯುತ್ತಾರೆ.

ಇತ್ತೀಚಿಗೆ ನನಗೊಂದು ಅನುಭವವಾಯಿತು. ಹೋಟೆಲಲ್ಲಿ ಒಬ್ಬನೇ ಕೂತು ಕಾಫಿ ಕುಡಿಯುವ ಸಂದರ್ಭ ನೋಡಿ, ಒಬ್ಬ ವಿದ್ಯಾರ್ಥಿ, ವಿದ್ಯಾರ್ಥಿಗಳಲ್ಲದ ಇನ್ನು ಕೆಲವು ಸಂಭಾವಿತ (!) ರೊಂದಿಗೆ ಗುಂಪು ಕೂಡಿ ಬಂದು, ನಾನು ಪರೀಕ್ಷೆಯಲ್ಲಿ ಕಾಪಿ ಹೊಡೆಯಲು ಬಿಡದಿದ್ದುದೇ ಒಂದು ದೊಡ್ಡ ಅಪರಾಧವೆಂಬಂತೆ ಅಶ್ಲೀಲವಾಗಿ ಮಾತಾಡಿದ, ಬೆದರಿಸಲು ನೋಡಿದ. (ಅನಂತರ ಆತನಿಗೆ ಏನಾಯಿತೆಂಬ ಸಂಪೂರ್ಣ ವಿವರಗಳನ್ನು, ಹೆಸರುಗಳನ್ನು ಬೇಕೆಂದೇ ನಾನು ಕೊಡುತ್ತಿಲ್ಲ. ಇಲ್ಲಿ ಅವು ಮುಖ್ಯವೂ ಅಲ್ಲ. ಆದರೆ ಇಂಥ ವಿದ್ಯಾರ್ಥಿಗಳ ಮತ್ತು ಅವರನ್ನು ಬೆಂಬಲಿಸುವವರ ಮನೋಭಾವ ಮುಖ್ಯ)

ಕೊಪ್ಪದಂತಹ ಸಣ್ಣ, ಶಾಂತ, ಸುಸಂಸ್ಕೃತಿಗೆ ಹೆಸರಾದ ಊರಲ್ಲೇ ವಿದ್ಯಾರ್ಥಿಗಳು ಇಷ್ಟು ಮುಂದುವರಿದ ಬಗ್ಗೆ ನನಗೆ ತೀರ ವಿಷಾದವೆನಿಸಿತು. ಅವರ, ಅವರನ್ನು ಬೆಂಬಲಿಸಿದ ಇತರರ ನೈತಿಕ ದಿವಾಳಿಕೋರತನಕ್ಕೆ ಕನಿಕರವೂ ಆಯಿತು.

ಹಾಗಾದರೆ ಇದಕ್ಕೆ ಪರಿಹಾರವೇನು? ಪರಿಹಾರ ಸುಲಭವಲ್ಲ ನಿಜ. ಆದರೆ ಅಸಾಧ್ಯವೂ ಅಲ್ಲ. ಆ ಕಷ್ಟದ ದಾರಿ ಎಂದರೆ— ನಮ್ಮ ಒಟ್ಟಾರೆ ವ್ಯವಸ್ಥೆಯೇ ಬದಲಾಗಬೇಕಿದೆ. ಮೌಲ್ಯಗಳನ್ನು ಗೌರವಿಸುವ, ಸಾಧನೆಗಳಿಗೆ ಬೆಲೆ ನೀಡುವ ನ್ಯಾಯದೃಷ್ಟಿ ನಮ್ಮಲ್ಲಿ ಮೊಳೆಯಬೇಕು. ಬೇರೇನೇ ಸಾಧ್ಯವಿಲ್ಲದಿದ್ದರೂ ಪರೀಕ್ಷೆಗಳಲ್ಲಿ ನಡೆಯುವ ಅಕ್ರಮಗಳನ್ನಂತೂ ಖಂಡಿತ ನಿಲ್ಲಿಸಲು ಸಾಧ್ಯವಿದೆ. ಇದಕ್ಕೆ ದಂಡ ಭಯ ಹೆಚ್ಚಾಗಬೇಕು. ಇವತ್ತು ನಡೆಯುವ ಹೆಚ್ಚಿನ ಅಕ್ರಮಗಳಿಗೆ ದಂಡಭಯದ ಅಭಾವವೇ ಕಾರಣ. ಪರೀಕ್ಷೆಗಳಲ್ಲಿ ನಡೆಯುವ ಅಕ್ರಮಗಳಿಗೆ ಕಣ್ಣು ಮುಚ್ಚಿದರೆ ಅಥವಾ ಪ್ರೋತ್ಸಾಹಿಸಿದರೆ ಅಥವಾ ಸಲ್ಲದ ಕರುಣೆ ತೋರಿದರೆ, ಆಗ ಒಟ್ಟು ಸಮಾಜವೇ ನರಕವಾಗಿ, ರೋಗ ಹಿಡಿದ ಮನಸ್ಸುಗಳುಳ್ಳ ಅಪ್ರಯೋಜಕವಾದ ಜನಾಂಗದ ಸೃಷ್ಟಿಗೆ ತಾವೂ ಕಾರಣರಾಗುತ್ತೇವೆ ಎಂಬ ಪ್ರಜ್ಞೆ ಮುಖ್ಯವಾಗಿ ಅಧ್ಯಾಪಕರಲ್ಲಿ ಮತ್ತು ಪೋಷಕರಲ್ಲಿ ಮೂಡಬೇಕಾಗಿದೆ.

—ಒಬ್ಬ ಅಧ್ಯಾಪಕ
ತಾ: 8.5.1985

ದರ್ಶಿನೀ ಶಿಕ್ಷಣ ಸಂಸ್ಥೆ (ರಿ)

ಶೃಂಗೇರಿ

ಮೇಲ್ಕಂಡ ಶಿಕ್ಷಣ ಸಂಸ್ಥೆಯ ಇಂಗ್ಲಿಷ್ ಮಾಧ್ಯಮದ ನರ್ಸರಿ ಹಾಗೂ ಒಂದನೆಯ ತರಗತಿಗಳು ದಿನಾಂಕ 10.6.1985 ರ ಬುಧವಾರದಿಂದ ಆರಂಭವಾಗಿವೆ. ಶಾಲೆಗೆ ಮಕ್ಕಳನ್ನು ಸೇರಿಸ ಬಯಸುವ ತಾಯಿ–ತಂದೆಯರು/ಪೋಷಕರು ಅಭ್ಯರ್ಥನಾ ಪತ್ರ ಹಾಗೂ ಪ್ರಾಸ್ಪೆಕ್ಟಸ್‌ಗಾಗಿ ಮ್ಯಾನೇಜರ್, ಟಿ.ಎ.ಪಿ.ಸಿ.ಎಂ.ಎಸ್. (ಲಿ), ಇವರನ್ನು ಸಂಪರ್ಕಿಸಬಹುದು.

ಸದರಿ ಶಿಕ್ಷಣ ಸಂಸ್ಥೆಯ ನರ್ಸರಿ ಹಾಗೂ ಒಂದನೆಯ ತರಗತಿಗಾಗಿ ಉಪಾಧ್ಯಾಯಿನಿಯರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಮೇ 25, 1985 ರೊಳಗಾಗಿ ಅಭ್ಯರ್ಥನಾಪತ್ರಗಳನ್ನು ಸ್ವೀಕರಿಸಲಾಗುವುದು. ಬಿ.ಎ./ಬಿ.ಎಸ್‌ಸಿ./ಬಿ.ಕಾಂ. ಮತ್ತು ತರಬೇತಿಯಾದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಅಧ್ಯಕ್ಷ/ಕಾರ್ಯದರ್ಶಿ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ, ಕೊಪ್ಪವಿಭಾಗ, ಕೊಪ್ಪ.

-: ಪ್ರ ಕ ಟ ಣೆ :-

ಈ ಮೂಲಕ ಕೊಪ್ಪ ಅರಣ್ಯ ವಿಭಾಗದ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕೊಪ್ಪ ತಾಲ್ಲೂಕಿನಲ್ಲಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಭೂಮಿಯನ್ನು ವರ್ಗಾಯಿಸುವ ಕೆಲಸವು ಅರಣ್ಯ ಇಲಾಖೆಯ ವತಿಯಿಂದ ನಡೆಯುತ್ತಿದೆ. ಈಗ ಗ್ರಾಮಗಳ ಸುತ್ತ ಮುತ್ತ ಇರುವಂತಹ ಕೃಷಿಗೆ ಯೋಗ್ಯವಲ್ಲದ, ಕಲ್ಲುಗುಡ್ಡೆಗಳು, ಕೆರೆಗಳು ಇರುವಂತಹ ಪ್ರದೇಶಗಳು ಮತ್ತು ಅರಣ್ಯದಿಂದ ಆವೃತವಾಗಿರುವಂತಹ ಪ್ರದೇಶಗಳನ್ನು ಅರಣ್ಯ ಇಲಾಖೆಯ ಸುಪರ್ದಿಗೆ ತೆಗೆದುಕೊಳ್ಳಲಾಗುತ್ತಿದೆ. ಈಗ ಅರಣ್ಯ ಇಲಾಖೆಯಿಂದ ಮೋಜಣಿಕಾರ್ಯವು ನಡೆಯುತ್ತಿದ್ದು, ಇದರ ಬಗ್ಗೆ ಗ್ರಾಮಸ್ಥರು ಹಲವು ವಿಧವಾದ ಅಡೆತಡೆಗಳನ್ನು ಮಾಡುವುದು ಕಂಡುಬಂದಿರುತ್ತದೆ. ಇದು ಗ್ರಾಮಸ್ಥರ ತಪ್ಪು ಕಲ್ಪನೆಯಿಂದ ಉಂಟಾಗಿರುವಂತೆ ತಿಳಿದುಬರುತ್ತದೆ. ಇದರಿಂದಾಗಿ ಗ್ರಾಮಸ್ಥರ ತಿಳುವಳಿಕೆಗಾಗಿ ಈ ವಿಷಯಗಳನ್ನು ತಿಳಿಸಲು ಬಯಸುತ್ತೇವೆ.

1) ಅರಣ್ಯ ಇಲಾಖೆಗೆ ಸೇರಿಸಬಹುದಾದ ಸ್ಥಳದ ಸರ್ವೆ ಮಾಡುವಾಗ—

ಅ) ಕಂದಾಯ ಇಲಾಖೆಯಿಂದ ನಮೂದಿಸಲ್ಪಟ್ಟ ಜಾಗವನ್ನು ಮತ್ತು ಅರಣ್ಯದಿಂದ ಆವೃತವಾದಂತಹ ಸ್ಥಳವನ್ನು ಮಾತ್ರ ಗಣನೆಗೆ ತೆಗೆದುಕೊಂಡು, ಅವುಗಳನ್ನು ಮಾತ್ರ ಸರ್ವೆ ಮಾಡಲಾಗುವುದು.

ಆ) ಈ ರೀತಿ ಸರ್ವೆ ಮಾಡುವಾಗ ಹಳೆಯದಾದ ವತ್ತುವರಿ ಅಂದರೆ 1978 ರ ಹಿಂದಿನ ಹಾಗೂ ಮನೆ ಮತ್ತು ಇತರ ಕಟ್ಟಡಗಳನ್ನು ಬಿಟ್ಟು, ಸೀಮಾ ರೇಖೆಯನ್ನು ಗುರುತಿಸಿ, ಕಲ್ಲುಗಳನ್ನು ನೆಡಲಾಗುವುದು.

ಇ) ಎಕರೆಗೆ ಇಪ್ಪತ್ತಕ್ಕಿಂತ ಹೆಚ್ಚು ಮರವಿರುವಂತಹ ಪ್ರದೇಶಗಳನ್ನು ಅರಣ್ಯ ಇಲಾಖೆಯು ಮರ ನೆಡುವ ಕಾರ್ಯಕ್ರಮಗಳಿಗಾಗಿ ಉಪಯೋಗಿಸುವುದಿಲ್ಲ. ಹೆಚ್ಚಾದ ಅರಣ್ಯ ಇರುವಂತಹ ಪ್ರದೇಶಗಳಿಂದ ಅದರ ಪಕ್ಕದಲ್ಲಿರುವಂತಹ ವ್ಯವಸಾಯಗಾರರು ಸೊಪ್ಪು ಮತ್ತು ಒಣ ಸೌದೆಯನ್ನು ಉಪಯೋಗಿಸಿಕೊಳ್ಳಬಹುದಾಗಿರುತ್ತದೆ. ಮತ್ತು ಅಜುಬಾಜಿನ ರೈತರೆ ಅದರ ರಕ್ಷಣೆಯನ್ನು ವಹಿಸಿಕೊಳ್ಳತಕ್ಕದ್ದಾಗಿದೆ.

ಈ) ಅರಣ್ಯವೆಂದು ಘೋಷಿಸಲ್ಪಟ್ಟಂತಹ ಸ್ಥಳವನ್ನು ಯಾವ ಕಾರಣಕ್ಕಾಗಿಯೂ ನಿರ್ವನ ಕಾರ್ಯಕ್ರಮಕ್ಕೆ ಉಪಯೋಗಿಸಲಾಗುವುದಿಲ್ಲ. ಹಾಗೂ ಅಲ್ಲಿರುವ ಮರಗಳನ್ನು ಕಡಿತಲೆ ಮಾಡಲಾಗುವುದಿಲ್ಲ.

2) ಮೇಲ್ಕಂಡ ಜಮೀನು ವರ್ಗಾವಣೆಯ ಕಾರ್ಯದ ಉಸ್ತುವಾರಿಗೆ ಅರಣ್ಯ ಇಲಾಖೆಯಿಂದ ಭೂಮಾಪನ ಕಾರ್ಯ ಮುಗಿದ ಬಳಿಕ, ಸರ್ಕಾರವು ಭೂಮಾಪನ ವ್ಯವಸ್ಥಾಧಿಕಾರಿ (ಸರ್ವೆ ಸೆಟಲ್‌ಮೆಂಟ್ ಆಫೀಸರ್) ಯನ್ನು ನೇಮಕ ಮಾಡಲಿದೆ. ಭೂಮಾಪನ ಕಾರ್ಯ ಮುಗಿದು ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವ ಮುನ್ನ ವರ್ಗಾಯಿಸಲ್ಪಡುವ ಪ್ರದೇಶದ ವಿವರವನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗುವುದು. ಆ ವೇಳೆಗೆ ಸಾರ್ವಜನಿಕರು ತಮ್ಮ ಕುಂದು ಕೊರತೆಗಳನ್ನು ಮೇಲ್ಕಂಡ ಅಧಿಕಾರಿಯವರ ಗಮನಕ್ಕೆ ತಂದಲ್ಲಿ, ಅವರು ಅದನ್ನು ಪರಿಶೀಲಿಸಿ, ಸೂಕ್ತ ರೀತಿಯಲ್ಲಿ ಬಗೆಹರಿಸುವರು. ಇದಕ್ಕೆ ಗ್ರಾಮಸ್ಥರ ಸಹಕಾರವನ್ನು ಕೋರಲಾಗಿದೆ.

(ಸಹಿ) ವಿನಯ್ ಲೂಥ್ರ,
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೊಪ್ಪ ವಿಭಾಗ, ಕೊಪ್ಪ.

ತಾರೀಖು: 9–5–85.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.